ತಾರೀಖು 30ನೆ ನವೆಂಬರ್ 1903.

ನಂ. ರೆ. 1543—ರೆ. ಫೈ. 19—1900, ಮೈಸೂರ ಸರ್ವಿಸ್ ರೆಗ್ಯುಲೇರ್ಷ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಮೈಸೂರು ಡಿಸ್ಟ್ರಿಕ್ಟು ಟಿ. ನರಸೀಪುರದ ತಾಲ್ಲೂಕಿನ ಅಮಲ್‌ದಾರ್‌ರಾದ ಮೆ॥ ಎಂ. ಜೆ. ಕೃಷ್ಣಸ್ವಾಮಿ ರಾಯರಿಗೆ 1903ನೆ ಅಕ್ಟೋಬರ್ 19ನೆ ತಾರೀಖಿನಾರಭ್ಯ 1 ತಿಂಗಳು 10 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಸದರೀಯವರು ಮೇಲ್ಕಂಡ ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ತಾಲ್ಲೂಕು ಷಿರಿಸ್ತೆದಾರ್‌ರಾದ ಕೃಷ್ಣಪ್ಪನವರು ಅಮಲ್‌ದಾರ್ ವ. ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕು ಕೆಲಸ ನೋಡತಕ್ಕದ್ದು.

ಬೆಂಗಳೂರಲ್ಲಿ ಜನರಲ್ ವ ರೆವಿನ್ಯೂ ಸೆಕ್ರಿಟೇಯಟ್ ಆಫೀಸಿನಲ್ಲಿಡಲ್ಪಟ್ಟಿರುವ ಅರ್ಜೀ ಪೆಟ್ಟಿಗೆಯು ದಿನವಹೀ ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರಿಟರಿ ಯವರಿಂದಲೂ, ಅವರು ಬೆಂಗಳೂರಲ್ಲಿ ಇಲ್ಲದ ಕಾಲದಲ್ಲಿ ಡೆಪ್ಯುಟಿ ಸೆಕ್ರಿಟರಿ ಯವರಿಂದಲೂ, ಮಧ್ಯಾನ್ಹ 12 ಘಂಟೆಗೆ ತೆಗಿಯಲ್ಪಟ್ಟು, ಅದರಲ್ಲಿನ ಅರ್ಜಿಗಳು ತೆಗದುಕೊಳ್ಳಲ್ಪಡುವವು.

ಹುಕುಂ ಬಮೋಜೀಬ್,
ಹೆಚ್. ವಿ. ನಂಜುಂಡಯ್ಯ,
ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರಿಟರಿ.

ಫಾರೆಸ್ಟ್.

ಇಸ್ತಿಹಾರ್‌ನಾಮೆ.

ತಾರೀಖು 30ನೆ ನವೆಂಬರ್ 1903.

ನಂ. 352—3783, ಸ್ಯ 1900ನೆ ಇಸವಿಯ XIನೆ ನಂಬರ್ ಮೈಸೂರು ಸೀಮೆಯ ಫಾರೆಸ್ಟ್ ರೆಗ್ಯುಲೇರ್ಷ್ 17ನೆ ಸೆಕ್ಷನಿನ ವಿಧಿಗಳನುಸರಿಸಿ ಮೈಸೂರ ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರು ಪ್ರಸಿದ್ಧಪಡಿಸುವದೇನಂದರೆ, ಈ ಇಸ್ತಿಹಾರ್‌ನಾಮೆಗೆ ಜಂಟಿಸಿರುವ ಷೆಡ್ಯೂಲಿನಲ್ಲಿ ನಮೂದಿಸಿರುವ ಚಕ್ತುಬಂದಿಯುಳ್ಳ ಪ್ರದೇಶವು 1904ನೆ ಜನವರಿ ಗುರ್ಯ ಲಾಗಾಯತು ಸದರೀ ಇಸ್ತಿಹಾರಿನ ಅಡೀಲಿ ವಿವರಿಸಿರುವ ಹಕ್ಕುಗಳ ಚಲಾವಣೆಗೆ ಒಳಪಟ್ಟು "ಸ್ಟೇಟ್ ಫಾರೆಸ್ಟ್‌ಗಾಗಿ" ಇರತಕ್ಕದ್ದೆಂದು ಎಣಿಸಲ್ಪಟ್ಟಿರುತ್ತೆ:—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಚಕ್ತುಬಂದಿ.
ತುಮಕೂರು.	ಕೊರಟಗೆರೆ ಸಬ್ ತಾಲ್ಲೂಕು.	1,649 ಎಕ್ರೆ 17 ಗುಂಟೆಗಳು.	ಸೆದ್ದಗಿರಿ ಸ್ಟೇಟ್ ಫಾರೆಸ್ಟ್ ಕೋಳಿಕಲ್ ಬ್ಲಾಕಿನ ಪಡಾನಣಿ.	ಉತ್ತರಕ್ಕೆ.—ನೆಗಲಾಲಿನ ಸರ್ವೆ ನಂ. 88ರ ನೈರುತ್ಯ ಮೂಲೆಯಿಂದ ಹೊರಟು ಪೈನು ಅದೇ ನಂಬರಿನ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಬುದಗಾವಿಯ ಸರ್ವೆ ನಂ. 29ರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 29 ಮತ್ತು 31 ಇವುಗಳ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 32ರ ನೈರುತ್ಯ ಮೂಲೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ತರುವಾಯ ಸರ್ವೆ ನಂ. 32ರ ದಕ್ಷಿಣ ಪಾರ್ಶ್ವ ಮತ್ತು ಸರ್ವೆ ನಂ. 33ರ ಪಶ್ಚಿಮ ಪಾರ್ಶ್ವ ಇವುಗಳ ಉದ್ದಕ್ಕೂ ಸರ್ವೆ ನಂ. 14ರ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ 14, 11 ಮತ್ತು 17 ಇವುಗಳ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಆಖ್ಯೈರ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಬುದಗಾವಿಯ ಸರ್ವೆ ನಂ. 17, 7 ಮತ್ತು 6 ಇವುಗಳ ಪೂರ್ವ ಪಾರ್ಶ್ವದ ಉದ್ದಕ್ಕೂ ಆಖ್ಯೈರ ಸರ್ವೆ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಬುದಗಾವಿಯ ಸರ್ವೆ ನಂ. 35, 39 ಮತ್ತು 38 ಇವುಗಳ ದಕ್ಷಿಣ ಎಲ್ಲೆಯಾಗಿರುವ ನಾಲಾ ಉದ್ದಕ್ಕೂ ಕುಂಟೇನಹಳ್ಳಿಯ ಸರ್ವೆ ನಂ. 11ರ ವಾಯುವ್ಯ ಮೂಲೆಗೆ ಹೋಗುತ್ತದೆ. ಪೂರ್ವಕ್ಕೆ.—ಆಮೇಲೆ ಕುಂಟೇನಹಳ್ಳಿಯ ಸರ್ವೆ ನಂ. 11 ಮತ್ತು ಬೆಂದೋಣಿಯ ಸರ್ವೆ ನಂ. 26 ಮತ್ತು 25 ಇವುಗಳ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಮದ್ದಗಿರಿ ಸ್ಟೇಟ್ ಫಾರೆಸ್ಟ್ ಕೋಳಿಕಲ್ ಬ್ಲಾಕಿನ ಎಲ್ಲೆಗೆ ಹೋಗುತ್ತದೆ. ತರುವಾಯ ಮೇಲ್ಕಂಡ ಎಲ್ಲೆಯ ಉದ್ದಕ್ಕೂ ಕುರ್ಚಕೋಟೆಯ ಸರ್ವೆ ನಂ. 66ರ ವಾಯುವ್ಯ ಮೂಲೆಗೆ ಹೋಗುತ್ತದೆ. ದಕ್ಷಿಣಕ್ಕೆ.—ಆಮೇಲೆ ಕುರ್ಚಕೋಟೆಯ ಸರ್ವೆ ನಂ. 53ರ ಉತ್ತರ ಪಾರ್ಶ್ವದ ಉದ್ದಕ್ಕೂ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಜುಂಜರಾವನಹಳ್ಳಿಯ ಸರ್ವೆ ನಂ. 1ರ ಮಧ್ಯೆ ಅದೇ ಗ್ರಾಮದ ಸರ್ವೆ ನಂ. 60ರ ಪೂರ್ವ ಎಲ್ಲೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ಪಶ್ಚಿಮಕ್ಕೆ.—ಆಮೇಲೆ ಜುಂಜರಾವನ ಹಳ್ಳಿಯ ಸರ್ವೆ ನಂ. 60 ಮತ್ತು ಮಾರೆನಾಯಕನ ಹಳ್ಳಿಯ ಸರ್ವೆ ನಂ. 42 ಇವುಗಳ ಪೂರ್ವ ಪಾರ್ಶ್ವದ ಉದ್ದಕ್ಕೂ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಈಶಾನ್ಯ ದಿಕ್ಕಾಗಿ ನೆಗಲಾಲಿನ ಸರ್ವೆ ನಂ. 102ರ ಮಧ್ಯೆ ಹೊರಟ ಸ್ಥಳಕ್ಕೆ ಹೋಗುತ್ತದೆ.